ಪ್ರಧಾನ ದಿವಾಣಿ & ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ
ಇವರ ನ್ಯಾಯಾಲಯದಲ್ಲಿ,

ಸಿ.ಸಿ.ನಂ.412/2020
ಸಿ.ಡಬ್ಲ್ಯು-6 ಪಿ.ಡಬ್ಲ್ಯು-1

| | | |
|---|---|---|
| ಸಾಕ್ಷಿದಾರರ ಹೆಸರು | : | ಮಾಳಪ್ಪ ನಿಂಗಪ್ಪ ಗುಣದಾಳ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಗದ್ಯಾಳ |

ದಿನಾಂಕ:25.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ: ಶ್ರೀ. ಸ.ಸ.ಅ ರವರಿಂದ.

ಚಾಸಾ-1 ಮತ್ತು ಮೃತ ಬೈರಪ್ಪ ಮತ್ತು ಆರೋಪಿತನ ಪರಿಚಯವಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಆರೋಪಿತನ ವಿರುದ್ಧ ಏನು ಪ್ರಕರಣವಾಗಿದೆ ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ, ನಾನು ತೋರಿಸಿದ ಸ್ಥಳದ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿಗೆ ಅಪಘಾತವಾದ ಸ್ಥಳದ ಪೊಟೊಗಳನ್ನು ತೋರಿಸಲಾಗಿ ಅದನ್ನು ಗುರುತಿಸಿರುವುದಿಲ್ಲ. ಸಾಕ್ಷ ಸ್ಥಳ ಪಂಚನಾಮೆ ಮೇಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಅಂತ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ಕಚ್ಚಾ ನಕ್ಷೆಯನ್ನು ನಿಪಿ-2 ಅಂತ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಸದರಿ ಎರಡೂ ಸಹಿಗಳನ್ನು ಪೊಲೀಸರ ಹೇಳಿಕೆಯ ಮೇರೆಗೆ ಮಾಡಿರುತ್ತೇನೆ.

[ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟಿಸವಾಲು ಮಾಡಲು ಅನಮತಿ ಕೊರಿದ್ದು, ಅನುಮತಿಸಲಾಯಿತು.

ಪಾಟಿಸವಾಲು: ಶ್ರೀ. ಸ.ಸ.ಅ. ರವರಿಂದ

ಕಳೆದ 6-7 ವರ್ಷಗಳ ಹಿಂದೆ ಸಂಜೆ 4-00 ಗಂಟೆಗೆ ನಾನು ಮತ್ತು ಮೃತ ಬೈರಪ್ಪ ಕೂಡಿಕೊಂಡು ನಮ್ಮ ಮೋಟಾರ್ ಸೈಕಲ ನಂ. ಕೆಎ-29/ಹೆಚ್-6932 ನೇದ್ದರ ಮೇಲೆ ಕಾಜಿಬೀಳಗಿ ಗ್ರಾಮದ ದೇವರಿಗೆ ಹೋಗಿ ಮರಳಿ ಬರುವಾಗ ಮೋಟಾರ್ ಸೈಕಲನ್ನು ಮೃತ ಬೈರಪ್ಪ ನಿರ್ಲಕ್ಷ್ಯತನದಿಂದ ನಡೆಸುತ್ತಿದ್ದು, ಗೊಠೆ ಗ್ರಾಮದ ದರ್ಗಾ ಹತ್ತಿರ ಬರುವಾಗ ಆರೋಪಿ ಎದರುಗಡೆಯಿಂದ ತನ್ನ ಮೋಟಾರ್ ಸೈಕಲನ್ನು ರಸ್ತೆಯ ಮೇಲೆ ಅಡ್ಡಾದಿಡ್ಡಿ ನಡೆಸಿಕೊಂಡು ಬಂದು ಇಬ್ಬರೂ ಮುಖಾಮುಖಿ ಡಿಕ್ಕಿಪಡಿಸಿ ಅಪಘಾತವಾಗಿದ್ದು, ಸದರಿ ಅಪಘಾತದಲ್ಲಿ ನನಗೆ ಮತ್ತು ಆರೋಪಿಗೆ ಸಾದಾ ಮತ್ತು ಒಳಪೆಟ್ಟುಗಳಾಗಿದ್ದು, ಬೈರಪ್ಪನಿಗೆ

ಭಾರಿ ಗಾಯ ಹೊಂದಿ ಸ್ಥಳದಲ್ಲಿಯೇ ಮೃತಪಟ್ಟಿದ್ದ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಆತ ನಿರಾಕರಿಸಿದ್ದರಿಂದ ಹೇಳಿಕೆಯನ್ನು ನಿಪಿ-3 ಅಂತ ಗುರುತಿಸಲಾಯಿತು.

ದಿ: 24.02.2019 ರಂದು ನಾನು ತೋರಿಸಿದ ಘಟನಾ ಸ್ಥಳವನ್ನು ಚಾಸಾ-2 & 3 ರವರ ಸಮಕ್ಷಮ ಪಂಚನಾಮೆ ಮಾಡಿ ಫೋಟೊ ತೆಗೆದಿರುತ್ತಾರೆಂದು ಸೂಚಿಸುವುದು ಸರಿಯಲ್ಲ. ನಂತರ ಅದೇ ದಿನ ಅಪಘಾತಕ್ಕಿಡಾದ ವಾಹನಗಳ ಜಪ್ತಿ ಪಂಚನಾಮೆ ಮಾಡಿ ವಶಕ್ಕೆ ಪಡೆದು ಫೋಟೊಗಳನ್ನು ತೆಗೆದಿರುತ್ತಾರೆಂದು ಸೂಚಿಸುವುದು ಸರಿಯಲ್ಲ.

ನಿಪಿ-1 ರಿಂದ 3 ಎಲ್ಲಾ ಸಂಗತಿ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟಿಸವಾಲು: ಶ್ರೀ. ವಕೀಲರಿಂದ ಆರೋಪಿ ಪರವಾಗಿ**

ಯಾವುದೇ ಪಾಟಿಸವಾಲು ಇಲ್ಲವೆಂದು ತಿಳಿಸುತ್ತಾರೆ.

**ಮರುವಿಚಾರಣೆ: ಇಲ್ಲ.**

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]

ಓ.ಹೇ.ಕೇ.ಸರಿ ಇದೆ.

ARASHAD ANSARI

Digitally signed by ARASHAD ANSARI
Date: 2025.04.25 13:44:36 +0530

ಸಹಿ/-
ಪ್ರಧಾನ ದಿವಾಣಿ ನ್ಯಾಯಾಧೀಶರು,
ಜಮಖಂಡಿ.